# Akashvani : Bangalore
# National Bulletin In Kannada
# 16.11.2024 / 7.35AM
## ಆಕಾಶವಾಣಿ, ಬೆಂಗಳೂರು
## ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- ಪ್ರಧಾನಿ ನರೇಂದ್ರ ಮೋದಿ ಇಂದಿನಿಂದ ನೈಜೀರಿಯಾ, ಬ್ರೆಜಿಲ್ ಹಾಗೂ ಗಯಾನಾ ದೇಶಗಳಿಗೆ ಆರು ದಿನಗಳ ಪ್ರವಾಸ
- ಈಶಾನ್ಯ ರಾಜ್ಯಗಳ ನಡುವಣ ಗಡಿ ವಿವಾದಗಳಿಗೆ ಸೌಹಾರ್ದಯುತ ಪರಿಹಾರ - ಪ್ರಧಾನಿ
- ಜಾರ್ಖಂಡ್ ವಿಧಾನಸಭೆಯ ೨ನೇ ಹಂತದ ಚುನಾವಣೆ; ರಾಜಕೀಯ ಪಕ್ಷಗಳ ಪ್ರಮುಖ ನಾಯಕರಿಂದ ಇಂದು ವಿವಿಧೆಡೆ ಪ್ರಚಾರ
- ಟಿ೨೦ ಅಂತಾರಾಷ್ಟ್ರೀಯ ಕ್ರಿಕೆಟ್; ದಕ್ಷಿಣ ಆಫ್ರಿಕಾ ವಿರುದ್ಧ ಭಾರತ ಭರ್ಜರಿ ಗೆಲುವು

**********

ಪ್ರಧಾನಿ ನರೇಂದ್ರ ಮೋದಿ ಅವರು ಇಂದಿನಿಂದ ನೈಜೀರಿಯಾ, ಬ್ರೆಜಿಲ್ ಹಾಗೂ ಗಯಾನಾ ದೇಶಗಳಿಗೆ ಆರು ದಿನಗಳ ಪ್ರವಾಸ ಕೈಗೊಳ್ಳಲಿದ್ದಾರೆ. ಮೂರು ದೇಶಗಳ ಭೇಟಿಯ ಮೊದಲ ಚರಣದಲ್ಲಿ ಪ್ರಧಾನಿ ಮೋದಿ, ನೈಜೀರಿಯ ಅಧ್ಯಕ್ಷ ಬೋಲಾ ಅಹ್ಮದ್ ಟಿನುಬು ಅವರ ಆಹ್ವಾನದ ಮೇರೆಗೆ ನೈಜೀರಿಯಾಕ್ಕೆ ಪ್ರಯಾಣ ಬೆಳೆಸಲಿದ್ದಾರೆ. ೧೭ ವರ್ಷಗಳ ನಂತರ ಭಾರತದ ಪ್ರಧಾನಿಯೊಬ್ಬರು ನೈಜೀರಿಯಾಕ್ಕೆ ಭೇಟಿ ನೀಡುತ್ತಿದ್ದಾರೆ. ತಮ್ಮ ಎರಡು ದಿನಗಳ ನೈಜೀರಿಯಾ ಭೇಟಿಯ ಸಂದರ್ಭದಲ್ಲಿ ಉಭಯ ದೇಶಗಳ ಪ್ರಧಾನಿಗಳು, ಎರಡು ದೇಶಗಳ ನಡುವಣ ಕಾರ್ಯತಂತ್ರ ಸಹಭಾಗಿತ್ವ ಪರಿಶೀಲನೆ ಹಾಗೂ ದ್ವಿಪಕ್ಷೀಯ ಸಂಬಂಧ ಹೆಚ್ಚಿಸುವ ಮಾರ್ಗೋಪಾಯಗಳ ಕುರಿತು ಚರ್ಚೆ ನಡೆಸಲಿದ್ದಾರೆ. ನೈಜೀರಿಯಾದಲ್ಲಿರುವ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಪ್ರಧಾನಿ ಮಾತನಾಡಲಿದ್ದಾರೆ. ಭಾರತ ಮತ್ತು ನೈಜೀರಿಯಾ ಆರ್ಥಿಕ, ಇಂಧನ ಹಾಗೂ ರಕ್ಷಣಾ ಸಹಯೋಗದೊಂದಿಗೆ ೨೦೦೭ರಿಂದ ಕಾರ್ಯತಂತ್ರ ಪಾಲುದಾರ ದೇಶಗಳಾಗಿವೆ. ನೈಜೀರಿಯಾದಲ್ಲಿನ ಪ್ರಮುಖ ವಲಯಗಳಲ್ಲಿ ೨೦೦ಕ್ಕೂ ಹೆಚ್ಚು ಭಾರತೀಯ ಕಂಪನಿಗಳು ೨೭ ಬಿಲಿಯನ್ ಡಾಲರ್‌ಗೂ ಹೆಚ್ಚು ಹೂಡಿಕೆ ಮಾಡಿವೆ. ಎರಡೂ ದೇಶಗಳು ಬಲಿಷ್ಠ ಅಭಿವೃದ್ಧಿ ಸಹಕಾರ ಪಾಲುದಾರಿಕೆಯನ್ನು ಹಂಚಿಕೊಂಡಿವೆ. ಪ್ರಧಾನಿ ನರೇಂದ್ರ ಮೋದಿ ಎರಡನೇ ಚರಣದಲ್ಲಿ ಈ ತಿಂಗಳ ೧೮ರಂದು ನೈಜೀರಿಯಾದಿಂದ ಬ್ರೆಜಿಲ್‌ನ ನಗರ ರಿಯೊ ಡಿ ಜನೈರೋಗೆ ಪ್ರಯಾಣಿಸಲಿದ್ದಾರೆ. ಅಲ್ಲಿನ ಅಧ್ಯಕ್ಷ ಲೂಯಿಸ್ ಇನಾಸಿಯೊ ಲೂಲಾ ಡಾ ಸಿಲ್ವಾ ಆಯೋಜಿಸಿರುವ ಜಿ-೨೦ ಶೃಂಗಸಭೆಯಲ್ಲಿ ಭಾಗಿಯಾಗಲಿದ್ದಾರೆ. ಭಾರತವು ಬ್ರೆಜಿಲ್ ಹಾಗೂ ದಕ್ಷಿಣ ಆಫ್ರಿಕಾದೊಂದಿಗೆ ಜಿ-೨೦ ಗುಂಪಿನ ಭಾಗವಾಗಿದ್ದು, ಜಿ೨೦ ಶೃಂಗಸಭೆಯ ಚರ್ಚೆಗಳಿಗೆ ಸಕ್ರಿಯ ಕೊಡುಗೆ ನೀಡುತ್ತಿವೆ.

ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಿ ಮೋದಿ ಅವರು, ವಿವಿಧ ಜಾಗತಿಕ ಅಂಶಗಳ ಕುರಿತು ಭಾರತದ ನಿಲುವನ್ನು ಸ್ಪಷ್ಟಪಡಿಸಲಿದ್ದಾರೆ. ಜಿ೨೦ ಶೃಂಗಸಭೆಯ ಸಂದರ್ಭದಲ್ಲಿ ಪ್ರಧಾನಿ ಅವರು, ಹಲವಾರು ನಾಯಕರನ್ನು ಭೇಟಿ ಮಾಡುವ ನಿರೀಕ್ಷೆ ಇದೆ. ಮೂರನೇ ಹಾಗೂ ಅಂತಿಮ ಚರಣದಲ್ಲಿ ಪ್ರಧಾನಿ ಮೋದಿ ಅವರು, ನವೆಂಬರ್ ೧೯ ರಿಂದ ೨೧ರ ವರೆಗೆ ಗಯಾನಾಕ್ಕೆ ಭೇಟಿ ನೀಡಲಿದ್ದಾರೆ. ೧೯೬೮ರ ನಂತರ ಭಾರತೀಯ ಪ್ರಧಾನಿಯೊಬ್ಬರ ಮೊದಲ ಗಯಾನ ಭೇಟಿ ಇದಾಗಿದೆ. ಕಳೆದ ವರ್ಷ ಗಯಾನ ಅಧ್ಯಕ್ಷ ಡಾಕ್ಟರ್ ಮೊಹಮ್ಮದ್ ಇರ್ಫಾನ್ ಅಲಿ ಅವರು ಮಧ್ಯಪ್ರದೇಶದ ಇಂದೋರ್‌ನಲ್ಲಿ ನಡೆದ ೧೭ನೇ ಪ್ರವಾಸಿ ಭಾರತೀಯ ದಿವಸ್ ಸಮಾರಂಭದ ಮುಖ್ಯ ಅತಿಥಿಯಾಗಿ ಭಾರತಕ್ಕೆ ಭೇಟಿ ನೀಡಿದ್ದರು. ಅಲ್ಲದೆ ಅವರಿಗೆ ಪ್ರವಾಸಿ ಭಾರತೀಯ ಸಮ್ಮಾನ್ ಪ್ರಶಸ್ತಿಯನ್ನು ನೀಡಿ, ಗೌರವಿಸಲಾಗಿತ್ತು. ತಮ್ಮ ಗಯಾನ ಭೇಟಿಯ ವೇಳೆ ಪ್ರಧಾನಿ, ಅಧ್ಯಕ್ಷ ಅಲಿ ಅವರೊಂದಿಗೆ ಸಮಾಲೋಚನೆ ನಡೆಸಲಿದ್ದು, ಆ ದೇಶದ ಹಲವು ಹಿರಿಯ ನಾಯಕರನ್ನು ಭೇಟಿ ಮಾಡಲಿದ್ದಾರೆ. ಅಲ್ಲದೆ ಗಯಾನ ಸಂಸತ್‌ಅನ್ನುದ್ದೇಶಿಸಿ ಭಾಷಣ ಮಾಡಲಿರುವ ಪ್ರಧಾನಿ, ಭಾರತೀಯ ಸಮುದಾಯದೊಂದಿಗೂ ಸಹ ಸಂವಾದ ನಡೆಸಲಿದ್ದಾರೆ. ಗಯಾನದ ಜಾರ್ಜ್‌ಟೌನ್‌ನಲ್ಲಿ ಪ್ರಧಾನಿ ಮೋದಿ, ಎರಡನೇ ಕ್ಯಾರಿಕಾಮ್-ಇಂಡಿಯಾ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಅಲ್ಲದೆ ಈ ವಲಯದೊಂದಿಗೆ ಭಾರತದ ದೀರ್ಘಕಾಲದ ಸ್ನೇಹವನ್ನು ಮತ್ತಷ್ಟು ಹೆಚ್ಚಿಸಲು ಕ್ಯಾರಿಕಾಮ್ ಸದಸ್ಯ ದೇಶಗಳ ನಾಯಕರೊಂದಿಗೆ ಸಭೆಗಳನ್ನು ನಡೆಸಲಿದ್ದಾರೆ. ಕೆರೆಬಿಯನ್ ಸಮುದಾಯ ಕೆರೆಬಿಯನ್ ಪ್ರದೇಶದ ೧೫ ಸದಸ್ಯ ರಾಷ್ಟ್ರಗಳ ಅಂತರ್ ಸರ್ಕಾರಿ ಸಂಸ್ಥೆಯಾಗಿದ್ದು, ಸದಸ್ಯರ ನಡುವೆ ಆರ್ಥಿಕ ಸಮನ್ವಯತೆ ಹಾಗೂ ಸಹಕಾರ ಉತ್ತೇಜಿಸುವ ಪ್ರಾಥಮಿಕ ಉದ್ದೇಶವನ್ನು ಹೊಂದಿದೆ.

**********

೨೦೨೦ರ ಶಾಂತಿ ಒಪ್ಪಂದದ ನಂತರ ಅಸ್ಸಾಂನ ಬೋಡೋ ಲ್ಯಾಂಡ್ ಅಭಿವೃದ್ಧಿಯ ಹೊಸ ಎತ್ತರವನ್ನು ತಲುಪಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ಸಂಜೆ ನಡೆದ ಬೋಡೋ ಲ್ಯಾಂಡ್ ಮಹೋತ್ಸವವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ, ೨೦೨೦ರ ಬೋಡೋ ಶಾಂತಿ ಒಪ್ಪಂದ, ಕೇವಲ ಬೋಡೋ ಸಮುದಾಯಕ್ಕೆ ಪ್ರಯೋಜನ ಕಲ್ಪಿಸದೆ, ಹಲವು ಶಾಂತಿ ಒಪ್ಪಂದಗಳಿಗೆ ಮಾರ್ಗಗಳನ್ನು ಮುಕ್ತಗೊಳಿಸಿದೆ ಎಂದು ಹೇಳಿದರು. ಶಾಂತಿ ಒಪ್ಪಂದದಿಂದಾಗಿ ಅಸ್ಸಾಂ ರಾಜ್ಯ ಒಂದರಲ್ಲೇ ೧೦ ಸಾವಿರಕ್ಕೂ ಹೆಚ್ಚು ಯುವಕರು ಶಸ್ತ್ರಾಸ್ತ್ರ ಹಾಗೂ ಹಿಂಸಾಚಾರವನ್ನು ತ್ಯಜಿಸಿ, ಮುಖ್ಯವಾಹಿನಿಗೆ ಸೇರಿದ್ದು, ಈ ಬೆಳವಣಿಗೆಯ ಪರಿಣಾಮ ನೋಡಿದ ನಂತರ ತಮಗೆ ತೃಪ್ತಿಯಾಗಿದೆ ಎಂದು ಪ್ರಧಾನಿ ಹೇಳಿದ್ದಾರೆ. ಬೋಡೋಲ್ಯಾಂಡ್ ಅಭಿವೃದ್ಧಿಗೆ ಕೇಂದ್ರ ಸರ್ಕಾರ ಒಂದು ಸಾವಿರದ ೫೦೦ ಕೋಟಿ ರೂಪಾಯಿ ವಿಶೇಷ ಪ್ಯಾಕೇಜ್ ನೀಡಿದೆ. ಅಸ್ಸಾಂ ರಾಜ್ಯ ಸರ್ಕಾರ ಸಹ ೭೦೦ ಕೋಟಿ ರೂಪಾಯಿ ಶಿಕ್ಷಣ, ಆರೋಗ್ಯ ಹಾಗೂ ಸಂಸ್ಕೃತಿಗೆ ಸಂಬಂಧಿಸಿದ ಮೂಲಸೌಕರ್ಯಗಳಿಗಾಗಿ ವೆಚ್ಚ ಮಾಡಿದೆ ಎಂದು ವಿವರಿಸಿದರು.

ನಕ್ಸಲ್ ವಾದದ ಕಡೆ ಮುಖ ಮಾಡಿರುವವರು ಬೋಡೋ ಜನತೆಯಿಂದ ಪಾಠ ಕಲಿಯಬಹುದಾಗಿದ್ದು, ಹಲವು ವರ್ಷಗಳ ಹೋರಾಟ ಹಾಗೂ ಮಧ್ಯಸ್ಥಿಕೆ ಪ್ರಯತ್ನಗಳ ನಂತರ ಹೊಸ ಇತಿಹಾಸ ಸೃಷ್ಟಿಸಿರುವ ಬೋಡೋ ಜನರನ್ನು ಪ್ರಧಾನಿ ಮೋದಿ ಶ್ಲಾಘಿಸಿದರು. ಈಶಾನ್ಯ ರಾಜ್ಯಗಳ ನಡುವಣ ಗಡಿ ವಿವಾದಗಳಿಗೆ ಸೌಹಾರ್ದಯುತ ಪರಿಹಾರ ಕಂಡುಕೊಳ್ಳುವ ಮೂಲಕ ಈಶಾನ್ಯದಲ್ಲಿ ಶಾಶ್ವತ ಶಾಂತಿಗೆ ಸರ್ಕಾರ ನಿರಂತರವಾಗಿ ಪ್ರಯತ್ನಿಸುತ್ತಿದೆ ಎಂದು ಪ್ರಧಾನಿ ಹೇಳಿದರು. ಈ ಸಂದರ್ಭದಲ್ಲಿ ಅಸ್ಸಾಂ ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ, ಬೋಡೋಲ್ಯಾಂಡ್ ಪ್ರದೇಶಿಕ ವಲಯ ಮುಖ್ಯಸ್ಥ ಪ್ರಮೋದ್ ಬೋರೋ, ಅಖಿಲ ಬೋಡೋ ವಿದ್ಯಾರ್ಥಿ ಸಂಘದ ಅಧ್ಯಕ್ಷ ದೀಪೇನ್ ಬೋಡೋ, ಬೋಡೋ ಸಾಹಿತ್ಯ ಸಭಾದ ಡಾ. ಸೂರತ್ ನರ್ಜಾರಿ ಮತ್ತಿತರ ಗಣ್ಯರು ಉಪಸ್ಥಿತರಿದ್ದರು. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ, ವರ್ಚುವಲ್ ಮೂಲಕ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ೨೦೨೦ರಲ್ಲಿ ಬೋಡೋ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲಾಗಿತ್ತು. ಈ ಶಾಂತಿ ಒಪ್ಪಂದವು ಬೋಡೋಲ್ಯಾಂಡ್‌ನಲ್ಲಿ ದಶಕಗಳ ಕಾಲ ನಡೆಯುತ್ತಿದ್ದ ಸಂಘರ್ಷ, ಹಿಂಸಾಚಾರಗಳನ್ನು ಪರಿಹರಿಸಿದ್ದಲ್ಲದೆ, ಶಾಂತಿಯುತ ಇತ್ಯರ್ಥಗಳಿಗೆ ಕಾರಣವಾಗಿದೆ.

**********

ಜಾರ್ಖಂಡ್ ವಿಧಾನಸಭೆಯ ೨ನೇ ಹಂತದ ಚುನಾವಣೆಗೆ ತಮ್ಮ ಪಕ್ಷದ ಅಭ್ಯರ್ಥಿಗಳ ಪರವಾಗಿ ಮತದಾರರನ್ನು ಸೆಳೆಯಲು ಎನ್‌ಡಿಎ ಹಾಗೂ ಪ್ರತಿಪಕ್ಷ ಐಎನ್‌ಡಿಐಎ ಮೈತ್ರಿಕೂಟದ ಪ್ರಮುಖ ನಾಯಕರು ರಾಜ್ಯದಲ್ಲಿ ಇಂದು ಭರಾಟೆಯ ಪ್ರಚಾರ ನಡೆಸಲಿದ್ದಾರೆ. ಬಿಜೆಪಿ ಹಿರಿಯ ನಾಯಕ ಕೇಂದ್ರ ಸಚಿವ ಅಮಿತ್ ಶಾ ಅವರು ಇಂದು ದುಮ್ಕಾ, ದಿಯೋಗರ್ ಹಾಗೂ ಧನ್ವಾರ್ ನಲ್ಲಿ ಮೂರು ಚುನವಣಾ ರ‍್ಯಾಲಿಗಳನ್ನುದ್ದೇಶಿಸಿ ಮಾತನಾಡಲಿದ್ದಾರೆ. ಮತ್ತೊಂದು ಕಡೆ ಕಾಂಗ್ರೆಸ್ ಅಧ್ಯಕ್ಷ ಎಂ. ಮಲ್ಲಿಕಾರ್ಜುನ ಖರ್ಗೆ, ಜಮ್‌ತಾರಾ ಹಾಗೂ ಖಿಜರಿಯಲ್ಲಿ ಚುನಾವಣಾ ಸಭೆಗಳನ್ನು ನಡೆಸಲಿದ್ದಾರೆ. ಜಾರ್ಖಂಡ್ ಮುಕ್ತಿ ಮೋರ್ಚಾದ ಹಿರಿಯ ನಾಯಕ ಹಾಗೂ ಮುಖ್ಯಮಂತ್ರಿ ಹೇಮಂತ್ ಸೊರೇನ್, ರಾಜ್ಯದ ವಿವಿಧೆಡೆ ಆರು ರ‍್ಯಾಲಿಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಆರ್ ಜೆ ಡಿ ನಾಯಕ ತೇಜಸ್ವಿ ಯಾದವ್ ಗೊಡ್ಡಾದಲ್ಲಿ ಚುನಾವಣಾ ಪ್ರಚಾರ ಸಭೆ ನಡೆಸಲಿದ್ದಾರೆ. ಚಿತ್ರನಟ, ರಾಜಕಾರಣಿ ಮಿಥುನ್ ಚಕ್ರವರ್ತಿ ದುಮ್ಕಾ ಹಾಗೂ ಜಮ್‌ತಾರಾದಲ್ಲಿ ಚುನಾವಣಾ ಸಭೆ ನಡೆಸಲಿದ್ದಾರೆ. ಶಿವರಾಜ್ ಸಿಂಗ್ ಚೌವ್ಹಾಣ್, ಹಿಮಂತ್ ಬಿಸ್ವ ಶರ್ಮಾ ಹಾಗೂ ಚಂಪೈ ಸೊರೇನ್ ಸೇರಿದಂತೆ ಬಿಜೆಪಿಯ ನಾಯಕರು, ಎನ್‌ಡಿಎ ಅಭ್ಯರ್ಥಿಗಳನ್ನು ಬೆಂಬಲಿಸಿ ಪ್ರಚಾರ ಮಾಡಲಿದ್ದಾರೆ. ಎಜೆಎಸ್‌ಯು ಹಾಗೂ ಎಡಪಕ್ಷಗಳ ನಾಯಕರು ಜಾರ್ಖಂಡ್‌ನ ವಿವಿಧ ಭಾಗಗಳಲ್ಲಿ ರ‍್ಯಾಲಿ ಹಾಗೂ ರೋಡ್ ಷೋಗಳನ್ನು ನಡೆಸುವ ನಿರೀಕ್ಷೆ ಇದೆ. ಎರಡನೇ ಹಾಗೂ ಅಂತಿಮ ಹಂತದ ಮತದಾನ ನವೆಂಬರ್ ೨೦ರಂದು ನಡೆಯಲಿದೆ. ಮತ ಎಣಿಕೆ ಇದೇ ತಿಂಗಳ ೨೩ರಂದು ನಡೆಯಲಿದೆ.

**********

ಶ್ರೀಲಂಕಾ ಸಂಸತ್ತಿಗೆ ನಡೆದ ಚುನಾವಣೆಯಲ್ಲಿ ಆಡಳಿತಾರೂಢ ನ್ಯಾಷನಲ್ ಪೀಪಲ್ಸ್ ಪವರ್ ಮೈತ್ರಿ ಕೂಟ ಭಾರೀ ಜಯ ಸಾಧಿಸಿದೆ. ಒಟ್ಟು ೨೨೫ ಸದಸ್ಯ ಬಲದ ಶ್ರೀಲಂಕಾ ಸಂಸತ್ತಿನ ಚುನಾವಣೆಯಲ್ಲಿ ಎಡ ಪಂಥೀಯ ಮೈತ್ರಿಕೂಟ ೧೫೯ ಸ್ಥಾನಗಳನ್ನು ಗೆದ್ದುಕೊಂಡಿದೆ. ಸಜಿತ್ ಪ್ರೇಮದಾಸ ನೇತೃತ್ವದ ಪ್ರಮುಖ ವಿರೋಧ ಪಕ್ಷ ೪೦ ಕ್ಷೇತ್ರಗಳಲ್ಲಿ ಜಯ ಗಳಿಸಿದೆ. ಇಲಂಕಿ ತಮಿಳ್ ಅರಸು ಕಡ್ಚಿ ಪಕ್ಷ ೮ ಸ್ಥಾನಗಳನ್ನು ಪಡೆದುಕೊಂಡಿದೆ. ಶ್ರೀಲಂಕಾದ ಮಾಜಿ ಅಧ್ಯಕ್ಷ ರನಿಲ್ ವಿಕ್ರಮಾಸಿಂಘೆ ನೇತೃತ್ವದ ಮೈತ್ರಿಕೂಟ ನ್ಯೂ ಡೆಮಾಕ್ರಟಿಕ್ ಫ್ರಂಟ್ ೫ ಕ್ಷೇತ್ರಗಳಲ್ಲಿ ಜಯ ಪಡೆದುಕೊಂಡಿದೆ.

**********

ದೇಶದ ಜಿಡಿಪಿ, ಮುಂದಿನ ೩ ಆರ್ಥಿಕ ವರ್ಷಗಳಲ್ಲಿ ಶೇಕಡ ೬.೫ ರಿಂದ ೭ರಷ್ಟು ಬೆಳವಣಿಗೆಯಾಗುವ ನಿರೀಕ್ಷೆಯಿದೆ. ಮೂಲಸೌಕರ್ಯ ಅಭಿವೃದ್ಧಿ ಮತ್ತು ಹೆಚ್ಚಿದ ಬೇಡಿಕೆಯಿಂದ ಪ್ರೇರಿತವಾದ ಭಾರತದ ಒಟ್ಟು ದೇಶೀಯ ಉತ್ಪನ್ನ-ಜಿಡಿಪಿ ಬೆಳವಣಿಗೆಯು, ರಚನಾತ್ಮಕ ಸುಧಾರಣೆಗಳು ಮತ್ತು ಉತ್ತಮ ಆರ್ಥಿಕ ನಿರೀಕ್ಷೆಗಳು, ಹಣಕಾಸು ಸಂಸ್ಥೆಗಳ ಸ್ಥಿತಿಸ್ಥಾಪಕತ್ವವನ್ನು ಬೆಂಬಲಿಸುತ್ತದೆ ಎಂದು ಎಸ್&ಪಿ ಜಾಗತಿಕ ರೇಟಿಂಗ್ಸ್ ತನ್ನ ಇತ್ತೀಚಿನ ಬ್ಯಾಂಕ್ ಔಟ್‌ಲುಕ್ ವರದಿಯಲ್ಲಿ ತಿಳಿಸಿದೆ. ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್, ಮೂಲಸೌಕರ್ಯ ಅಭಿವೃದ್ಧಿ, ಹೂಡಿಕೆ ಮತ್ತು ಹೆಚ್ಚುತ್ತಿರುವ ಬೇಡಿಕೆಯಿಂದ ಪ್ರೇರಿತವಾದ ದೇಶದ ಬೆಳವಣಿಗೆ ಯಥಾ ಸ್ಥಿತಿಯಲ್ಲಿ ಮುಂದುವರೆಯಲಿದೆ ಎಂದು ಕಳೆದ ತಿಂಗಳು ಹೇಳಿದ್ದರು. ಭಾರತ ೨೦೨೪-೨೫ನೇ ಆರ್ಥಿಕ ವರ್ಷಕ್ಕೆ ಮೊದಲು ನೈಜ ಜಿಡಿಪಿ ಶೇಕಡ. ೭.೨ ರಷ್ಟು ಬೆಳವಣಿಗೆ ಹೊಂದಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದರು.

**********

ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ನ ವಾಂಡರರ್ಸ್ ಸ್ಟೇಡಿಯಂನಲ್ಲಿ ನಿನ್ನೆ ರಾತ್ರಿ ನಡೆದ ನಾಲ್ಕನೇ ಮತ್ತು ಅಂತಿಮ ಟಿ೨೦ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯದಲ್ಲಿ ಭಾರತವು ದಕ್ಷಿಣ ಆಫ್ರಿಕಾವನ್ನು ೧೩೫ ರನ್‌ಗಳ ಬೃಹತ್ ಅಂತರದಿಂದ ಸೋಲಿಸಿತು. ಈ ಗೆಲುವಿನೊಂದಿಗೆ ನಾಲ್ಕು ಪಂದ್ಯಗಳ ಟಿ೨೦ ಸರಣಿಯನ್ನು ೩-೧ ಅಂತರದಿಂದ ವಶಪಡಿಸಿಕೊಂಡಿತು. ಗೆಲುವಿಗೆ ೨೮೪ ರನ್‌ಗಳ ಗುರಿ ಬೆನ್ನತ್ತಿದ ದಕ್ಷಿಣ ಆಫ್ರಿಕಾ ೧೮.೨ ಓವರ್‌ಗಳಲ್ಲಿ ೧೪೮ ರನ್‌ಗಳಿಗೆ ಆಲೌಟಾಯಿತು. ಮೊದಲು ಬ್ಯಾಟ್ ಮಾಡಿದ ಭಾರತ ನಿಗದಿತ ೨೦ ಓವರ್‌ಗಳಲ್ಲಿ ಒಂದು ವಿಕೆಟ್ ನಷ್ಟಕ್ಕೆ ೨೮೩ ರನ್ ಗಳಿಸಿತು.

**********